ಬೇಕಿಲ್ಲ' ಎಂದು ಗುಡುಗಿದ್ದಳು. ಅಂದು ಹೋದ ಮಗ ಸೊಸೆ ಮತ್ತೆ ಊರಿನ ಕಡೆ ಮುಖ ಮಾಡಿದ್ದಿಲ್ಲ. ಅದೇ ವರ್ಷದಲ್ಲೆ ನಾರಾಯಣಪ್ಪನು ಆಕ್ಸಿಡೆಂಟ್ ಒಂದರಲ್ಲಿ ತೀರಿಕೊಂಡಿದ್ದ. ಅಂದಿನಿಂದ ಅವಳು ಒಂಟಿಯಾಗೆ ಜೀವನ ಸಾಗಿಸುತ್ತಿದ್ದಾಳೆ. ಎದೆಯ ಭಾರ ಜಾಸ್ತಿ ಆದಾಗಲೆಲ್ಲ ಆಕಾಶದ ಕಡೆ ಕೈ ತೋರಿಸಿಯೊ, ಊರ ದೇವಸ್ಥಾನದ ಕಡೆ ಕೈತೋರಿಸಿಯೊ ತೋಚಿದ್ದು ಬೈದು ಹಗುರಾಗುತ್ತಾಳೆ.

ಬಿಸಿಲು ಬಲಿಯತೊಡಗಿದಂತೆ ತುಸು ತುಸುವೆ ನಂಜಮ್ಮನ ಮನೆಯ ಮುಂಭಾಗದ ಗೋಡೆಯನ್ನು ನೆಕ್ಕತೊಡಗಿತು. ನಂಜಮ್ಮ ನಿಸ್ಸಾರಗೊಂಡವಳಂತೆ ಗೋಡೆಗೊರಗಿ ಕುಳಿತಿದ್ದಳು. ಬಿಸಿಲು ಅವಳ ಹಣೆಯನ್ನು ನೇವರಿಸಿ ಸಂತೈಸುತ್ತಿರುವಂತೆ ಕಾಣತೊಡಗಿತು. ಅವಳಿಗೆ ತುಸುವೆ ಚೈತನ್ಯ ಬಂದಂತಾಗಿ ಎದ್ದು ಗೇಟಿನ ಬಳಿ ಬಂದಳು. ಬೀದಿಯಲ್ಲಿ ನಾಯಿಯೊಂದು ಆಕಾಶದ ಕಡೆ ಮುಖಮಾಡಿ ದೀರ್ಘವಾದ ಆಲಾಪವನ್ನು ಮಾಡುತ್ತಲಿತ್ತು. ಅವಳು, 'ನಂದಾತು, ಇವಾಕ ನಿಂದ... ಜೀವ ಸುಮ್ಕಿರಾಕಿಲ್ಲ ನೋಡು' ಎಂದುಕೊಳ್ಳುತ್ತ ತನ್ನ ಕಡೆಗೆ ಬರುತ್ತಿರುವ ನಾಗರಾಜನನ್ನು ದಿಟ್ಟಿಸಿದಳು. ಅವನ ಕಂಗಳಲ್ಲಿ ಸುದ್ದಿಯೊಂದನ್ನು ಮುಟ್ಟಿಸುವ ಕಾತುರವಿತ್ತು. ಬಂದವ್ನೆ, 'ಯಕ್ಕೊ ವೆಂಕ್ಟೇಶ ಫೋನ್ ಮಾಡಿದ್ದ. ನಾಳೀಕೆ ಎಣ್ತಿ ಮಗ್ಳು ಎಲ್ಲ ಬರ್ತಾವ್ರಂತೆ' ಎಂದು ನುಡಿದ. ಅವಳಲ್ಲೇನು ಅಂತಹ ಬದಲಾವಣೆಗಳಾಗಲಿಲ್ಲ. ಸುಮ್ಮನೆ ಕೇಳಿಸಿಕೊಳ್ಳುತ್ತ ನಿಂತಿದ್ದಳು. ಅವರು ಊರಿಗೆ ಬಂದರೂ ಸೊಸೆ ತನ್ನನ್ನು ಮಾತನಾಡಿಸುವುದಿಲ್ಲವೆಂಬ ಖಾತರಿಯಿತ್ತು. ಊರ ಮಂದಿಯ ಮುಂದೆ ಅತ್ತಿ ಸೊಸಿ ಮಾತಾಡ್ದೆ ಕುಂತಿದ್ರೆ ಹೋಗೋದು ತನ್ನ ಮಾನಾನೆ ಅಲ್ಲವೆ ಎಂಬ ಎಣಿಕೆಯಲ್ಲಿ ಅವಳು ನಿಂತಿದ್ದಳು. ಹಾಗೆ ಸುಮ್ಮನೆ ಕೂತು ಹೋಗುವುದಕ್ಕೆ ಬರುವ ಅವಶ್ಯಕತೆಯಾದ್ರು ಏನುಂಟು ಎಂದು ಯೋಚಿಸುತ್ತಿದ್ದವಳಿಗೆ ನಾಗರಾಜ ಮತ್ತೆ, 'ಯಕ್ಕೊ ಏನೊ ಬಾಳ ಇಂಪಾರ್ಟೆಂಟ್ ಕೆಲಸ್ವಂತೆ. ಮನೆ ವಿಶ್ಯ ಮಾತಾಡ್ಬೇಕು ಅಂತ್ಲೇನೊ ಹೇಳ್ತಿದ್ದ. ಆಮೇಕೆ ನೀನು ಮನೇಕೆ ಇರ್ಬೇಕು ಅಂತ ಬೇರೆ ಹೇಳ್ದ' ಎಂದು ನುಡಿಯುತ್ತಿದ್ದಂತೆ ನಂಜಮ್ಮನ ಕಂಗಳು ಅರಳತೊಡಗಿದವು. ಅವಳೊಳಗೆ ಸಣ್ಣದೊಂದು ಆಸೆ ಪುಟಿದೇಳತೊಡಗಿತು. ವೆಂಕ್ಟೇಶನ ಮನಸ್ಸಿನಲ್ಲಿ ತನ್ನ ಹರಕಲು ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿಸಿಕೊಡುವ ಉದ್ದೇಶ ಇದ್ದರೂ ಇರಬಹುದು ಎಂದು ಊಹಿಸತೊಡಗಿದಳು. ಹಾಗೊಂದು ಬಣ್ಣಬಣ್ಣದ ಮನೆ ಅಂತಾಗಿ ಊರ ಮಂದಿ, 'ನೋಡ್ರೊ ನಂಜಮ್ಮಕ್ಕನ ಮನಿ ಏನ್ ಪಸಂದಾಗೈತಿ' ಎಂದು ನುಡಿಯುವುದನ್ನು ಕೇಳಿಸಿಕೊಳ್ಳಬೇಕೆಂಬ ಆಸೆ ಅವಳೊಳಗೆ ಚಿಗುರೊಡೆಯತೊಡಗಿತು. ಅಲ್ಲೆ ನಿಂತಿದ್ದ ನಾಗರಾಜನಿಗೆ, 'ಆಮೇಕೇನಾರ ಯೇಳಿದ್ನೇನ್ಲ' ಎಂದು ಕೇಳಿದಳು. ಅವನಿಗೆ ಅವಳ ಕಂಗಳೊಳಗಿನ ಹೊಳಪು ಸ್ಪಷ್ಟವಾಗಿ ಕಾಣುವಂತಿತ್ತು. ನಾಯಿ ತನ್ನ ಆಲಾಪವನ್ನು ನಿಲ್ಲಿಸಿ ಅಲ್ಲೆ ಪಾಳು ಬಿದ್ದ ಮನೆಯ ಗೋಡೆಗೆ ಕಾಲೆತ್ತಿ ಮೂತ್ರ ಮಾಡುತ್ತಿತ್ತು. ಕಂಬಿಯ ಮೇಲಿದ್ದ ಕಾಗೆಗಳು ಕೂಗುತ್ತ ಅರಳಿ ಮರದ ಒಡಲೊಳಗೆ ತೂರಿಕೊಂಡವು. ಅವಳ ಅಂಗಳದಲ್ಲಿ ಒಂಟಿ ಗುಬ್ಬಿಯ ಜೊತೆಗೆ ಮತ್ತೊಂದಿಷ್ಟು ಗುಬ್ಬಿಗಳು ಜೊತೆಯಾಗಿ ರಾಗಿ ಕಾಳುಗಳನ್ನು ಹೆಕ್ಕಿ ಸಂಭ್ರಮಿಸುತ್ತಿದ್ದವು. ನಾಗರಾಜ, 'ಮತ್ತೇನು ಹೇಳ್ಳಿಲ್ಲ ಕನಕ್ಕ. ಆದ್ರೆ ಮಗಳ ಪಟಾನ ಫೇಸ್‌ಬುಕ್‌ನಾಗ ಹಾಕವನೆ. ಪಸಂದಾಗೌಳೆ' ಎಂದು ನುಡಿದು ಮೊಬೈಲ್ ತೆಗೆದು ಫೇಸ್‌ಬುಕ್ಕಿನಲ್ಲಿರುವ ಚಿತ್ರವನ್ನು ತೋರಿಸತೊಡಗಿದ. ಅವಳು, 'ಆಹಾ ನನ್ ಕಂದ ಏನ್ ಮುದ್ದಾಗಿದೀ ಮಗ್ಳೆ. ಇರು ನನ್ ದೃಷ್ಟೀನೆ ತಗಲೋಂಗಿದೆ' ಎನ್ನುತ್ತ ಮೊಬೈಲಿನ ಪರದೆ ಮುಟ್ಟಿ ಕೈಬೆರಳುಗಳನ್ನು ಮಡಚಿ ತಲೆಯ ಇಕ್ಕೆಲೆಗಳಿಗೆ ಅದುಮಿ ನಟಿಕೆ